# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1115 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 23-02-2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಅಂಗನವಾಡಿ ಹಂತದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ಇತರ ಇಲಾಖೆಗಳ ಸಮೀಕ್ಷೆ ಸಹಿತ ಹೆಚ್ಚುವರಿ ಜವಾಬ್ದಾರಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹಿಂದುಳಿಯುವಿಕೆಗೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಮೀಕ್ಷಾ ಕಾರ್ಯಕ್ಕೆ ಖಾಸಗಿ ಮೊಬೈಲ್ ಬಳಸಲು ಅವಕಾಶವಿದೆಯೇ; ಈ ಕಾರಣದಿಂದಾಗಿ ಅಂಗನವಾಡಿ ಕಾರ್ಯಕರ್ತೆಯರು ಆಗಾಗ ಮುಷ್ಕರ ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು) | ಕ್ಷೇತ್ರ ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಇತರೆ ಇಲಾಖೆಗಳ ಸಮೀಕ್ಷೆ ಸಹಿತ ಜವಾಬ್ದಾರಿಯನ್ನು ವಹಿಸಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಆದಾಗ್ಯೂ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಇತರೆ ಇಲಾಖೆಗಳ ಸಮೀಕ್ಷೆ ಮುಂತಾದ ಕೆಲಸಗಳನ್ನು ಸದರಿ ಇಲಾಖೆಗಳು ವಹಿಸಿದ ಮಾದರಿಯಂತೆ ನಿರ್ವಹಿಸುತ್ತಾ, ಇದರೊಂದಿಗೆ ಇಲಾಖೆಯ ಐ.ಸಿ.ಡಿ.ಎಸ್. ಯೋಜನೆಯ ಅಂಗನವಾಡಿ ಫಲಾನುಭವಿಗಳಿಗೆ ಒದಗಿಸುವ ಸೌಲಭ್ಯವನ್ನು ಸಮರ್ಪಕವಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಿಸಿರುತ್ತಾರೆ. ಇತರೆ ಇಲಾಖೆಗಳ ಸಮೀಕ್ಷಾ ಕಾರ್ಯವನ್ನು ಆಯಾ ಇಲಾಖೆಗಳು ಒದಗಿಸುವ ಮೊಬೈಲ್ ಇತ್ಯಾದಿ ಸೌಲಭ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಇಲಾಖೆಗಳೇ ಮೇಲ್ವಿಚಾರಣೆ ಮಾಡುತ್ತಿವೆ.<br><br>ಅಂಗನವಾಡಿ ಕಾರ್ಯಕರ್ತೆಯರಿಗೆ ಅನ್ಯ ಇಲಾಖೆಗಳ ಕೆಲಸಗಳನ್ನು ನಿರ್ವಹಿಸಲು ಸೂಚಿಸದಂತೆ ಈಗಾಗಲೇ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರದ ಮೂಲಕ ತಿಳಿಸಲಾಗಿದೆ.<br><br>ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಸಂಘಟನೆಗಳು ವಿವಿಧ ಬೇಡಿಕೆಗಳ ಕುರಿತಂತೆ ಆಗಾಗ್ಗೆ ಮುಷ್ಕರಗಳನ್ನು ನಡೆಸುತ್ತಿದ್ದು, ಬೇಡಿಕೆಗಳ ಈಡೇರಿಕೆಗಾಗಿ ಮನವಿಗಳನ್ನು ಸಲ್ಲಿಸುತ್ತಿರುತ್ತಾರೆ. ಸದರಿ ಬೇಡಿಕೆಗಳನ್ನು ನಿಯಮಾನುಸಾರ ಆದ್ಯತೆ ಮೇರೆಗೆ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತಿದೆ. |
| ಆ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಒಂದರಿಂದ ಆರು ವರ್ಷದ ಒಳಗಿನ ಕಡಿಮೆ ತೂಕವಿರುವ ಹಾಗೂ ಅಪೌಷ್ಠಿಕ ಮಕ್ಕಳಿಗೆ ಪೂರಕ ಆಹಾರವನ್ನು ಅಂಗನವಾಡಿ ಮೂಲಕ ನೀಡಲಾಗುತ್ತಿದ್ದು, ಸದರಿ ವಯಸ್ಸಿನ ಖಾಸಗಿ/ ಸರ್ಕಾರಿ ಎಲ್.ಕೆ.ಜಿ/ ಯು.ಕೆ.ಜಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಸಗಿ ಬಾಲಮಂದಿರಗಳಲ್ಲಿ ಶಿಶು ಪಾಲನಾ ಕೇಂದ್ರದಲ್ಲಿ ಇರುವ ಮಕ್ಕಳಿಗೆ ಪೋಷಕ ಆಹಾರವನ್ನು ನೀಡುವ ಹಾಗೂ ಮಕ್ಕಳ ಆರೋಗ್ಯವನ್ನು ತಪಾಸಿಸುವ ಅಥವಾ ಪೌಷ್ಠಿಕಾಂಶವನ್ನು ಹೆಚ್ಚಿಸುವ ಯಾವುದೇ ರೀತಿಯ ಕಾರ್ಯಕ್ರಮಗಳು ಇವೆಯೇ; ಈ ಕುರಿತು ಸರ್ಕಾರ ಏನು ಕ್ರಮ ವಹಿಸಿದೆ; | ಪೋಷಣ ಅಭಿಯಾನ ಯೋಜನೆಯಡಿ ತಿಂಗಳಿಗೆ ಎರಡು ಸಮುದಾಯ ಆಧಾರಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮನೆ ಭೇಟಿ, ತಾಯಂದಿರ ಸಭೆ, ಪೌಷ್ಠಿಕ ಶಿಬಿರ ಹಾಗೂ ಆರೋಗ್ಯ ತಪಾಸಣೆ ಮುಂತಾದವುಗಳನ್ನು ನಡೆಸಲಾಗುತ್ತಿದೆ. ಇದಲ್ಲದೆ ವರ್ಷಕ್ಕೊಮ್ಮೆ ಪೋಷಣ ಮಾಹೆ ಹಾಗೂ ಪೋಷಣ ಪಕ್ವಾಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಿಸಲು ಆಂದೋಲನಗಳನ್ನು ನಡೆಸಲಾಗುತ್ತಿದೆ. |

| | | |
|---|---|---|
| ಇ | ಅಂಗನವಾಡಿ ವ್ಯಾಪ್ತಿಯ ಸಮೀಕ್ಷೆಯಲ್ಲಿರುವ ಅಂಗನವಾಡಿಗಳಿಗೆ ಬಾರದಿರುವ 3-6 ವರ್ಷದ ಮಕ್ಕಳು ಸರ್ಕಾರದ ಪೌಷ್ಠಿಕಾಂಶ ಯೋಜನೆಯ ಕಾರ್ಯಕ್ರಮದಿಂದ ಹೊರಗುಳಿ ಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಮಕ್ಕಳ ಸಂಖ್ಯೆ ಎಷ್ಟು ಇಂತಹ ಮಕ್ಕಳನ್ನು ಪೌಷ್ಠಿಕಾಂಶ ಕಾರ್ಯಕ್ರಮದ ವ್ಯಾಪ್ತಿಯೊಳಗೆ ತರಲು ಸರ್ಕಾರ ಚಿಂತಿಸಿದೆಯೇ; (ತಾಲ್ಲೂಕುವಾರು ಅಂಕಿ-ಅಂಶಗಳನ್ನು ಮತ್ತು ಸರ್ಕಾರದ ನಿಯಮಗಳು ಸುತ್ತೋಲೆಗಳ ಸಹಿತ ವಿವರಗಳನ್ನು ನೀಡುವುದು) | ಅಂಗನವಾಡಿ ವ್ಯಾಪ್ತಿಯಲ್ಲಿ ಅಂಗನವಾಡಿಗಳಿಗೆ ದಾಖಲಾಗುವ 3 ರಿಂದ 6 ವರ್ಷದ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅಗತ್ಯವಿರುವ ಪ್ರೋಟೀನ್ ಮತ್ತು ಕ್ಯಾಲೋರಿ ಒಳಗೊಂಡ ಪೂರಕ ಪೌಷ್ಠಿಕ ಆಹಾರವನ್ನು ನಿಯಮಿತವಾಗಿ ಒದಗಿಸಲಾಗುತ್ತಿದ್ದು, 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಮನೆಗೆ ಒದಗಿಸಲಾಗುತ್ತಿದೆ.<br><br>ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿಯನ್ನು ಗ್ರಾಮ, ನಗರ ಮತ್ತು ಬಿ.ಬಿ.ಎಂ.ಪಿ. ವಲಯವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ. | ಕ್ಷಿಪ್ರ ಸಮಯದಲ್ಲಿ ಅನುದಾನ ಬಿಡುಗಡೆಯಾಗದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಎಷ್ಟು ಸಮಯದಿಂದ ವೇತನ / ಗೌರವಧನ ಪಾವತಿಗೆ ಬಾಕಿಯಿದೆ? (ಪ್ರಸ್ತುತ ಒಂದು ವರ್ಷದ ವಿವರ ನೀಡುವುದು) | 2023-24ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ವೇತನ/ ಗೌರವಧನ ಪಾವತಿಯನ್ನು ಮಾರ್ಚ್ 2023 ರಿಂದ ಡಿಸೆಂಬರ್ 2023ರ ವರೆಗೆ ಪಾವತಿಸಲಾಗಿರುತ್ತದೆ.<br><br>ಉಳಿದ 2 ತಿಂಗಳ (ಜನವರಿ 2024 ಮತ್ತು ಫೆಬ್ರುವರಿ 2024)ರ ವೇತನ /ಗೌರವಧನವನ್ನು ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2024, ದಿನಾಂಕ: 05.02.2024 ರಂದು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದ್ದು, ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. |

**ಸಂಖ್ಯೆ: ಮಮಇ 59 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ

| ಶಾಲೆಯಿಂದ ಹೊರಗುಳಿದ 6 ತಿಂಗಳಿನಿಂದ 6 ವರ್ಷದ ಮಕ್ಕಳ ಮಾಹಿತಿ (ಜೂನ್ 2022ರ ಅಂತ್ಯಕ್ಕೆ) (ನಗರ ಯೋಜನೆಗಳು ಮಾತ್ರ) | | | | | | | |
|---|---|---|---|---|---|---|---|
| ಕ್ರ. ಸಂ. | ಜಿಲ್ಲೆಗಳ ಹೆಸರು | ಪಂಚಾಯತ್ ರಾಜ್ ಇಲಾಖೆಯವರ ಸರ್ವೆ 2020-21ರ ಅನ್ವಯ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗದ ಮಕ್ಕಳ ಸಂಖ್ಯೆ | | | ಸರ್ವೆ 2020-21ರ ಅನ್ವಯ ಪರಿಶೀಲಿಸಿ ಅಂಗನವಾಡಿ ಕೇಂದ್ರದಲ್ಲಿ ದಾಖಲೆಗೆ ತೆಗೆದುಕೊಂಡ ಮಕ್ಕಳ ಸಂಖ್ಯೆ | | |
| | | 6-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು | 6-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು |
| 1 | 2 | 3 | 4 | 5 | 6 | 7 | 8 |
| 1 | ಬಾಗಲಕೋಟೆ | 3063 | 4167 | 7230 | 3042 | 4012 | 7054 |
| 2 | ಬಳ್ಳಾರಿ | 4169 | 6135 | 10304 | 3752 | 5522 | 9274 |
| 3 | ವಿಜಯನಗರ | | | | | | |
| 3 | ಬೆಳಗಾವಿ | 7627 | 7736 | 15368 | 7627 | 2925 | 10552 |
| 4 | ಬೆಂಗಳೂರು (ನಗರ) | 4317 | 8074 | 12391 | 4317 | 8074 | 12391 |
| 5 | ಬೆಂಗಳೂರು (ಗ್ರಾ.) | 1632 | 2234 | 3866 | 1632 | 1898 | 3530 |
| 6 | ಬೀದರ್ | 1953 | 3642 | 5595 | 1937 | 3611 | 5548 |
| 7 | ಚಾಮರಾಜನಗರ | 698 | 1411 | 2109 | 698 | 1257 | 1955 |
| 8 | ಚಿಕ್ಕಬಳ್ಳಾಪುರ | 1446 | 1720 | 3166 | 1446 | 110 | 1556 |
| 9 | ಚಿಕ್ಕಮಗಳೂರು | 2378 | 3469 | 5847 | 2378 | 3469 | 5847 |
| 10 | ಚಿತ್ರದುರ್ಗ | 1482 | 2460 | 3942 | 1450 | 2300 | 3750 |
| 11 | ದಕ್ಷಿಣ ಕನ್ನಡ | 1315 | 2052 | 3367 | 1315 | 1796 | 3111 |
| 12 | ದಾವಣಗೆರೆ | 1485 | 3299 | 4784 | 1696 | 1975 | 3671 |
| 13 | ಧಾರವಾಡ | 13424 | 16953 | 30377 | 29268 | 21926 | 51194 |
| 14 | ಗದಗ | 561 | 1265 | 1826 | 251 | 277 | 528 |
| 15 | ಹಾಸನ | 1112 | 1462 | 2574 | 500 | 359 | 859 |
| 16 | ಹಾವೇರಿ | 3347 | 4726 | 8073 | 3347 | 4726 | 8073 |
| 17 | ಕಲಬುರಗಿ | 8205 | 12040 | 20245 | 7635 | 8537 | 16172 |
| 18 | ಕೊಡಗು | 839 | 705 | 1544 | 819 | 226 | 1045 |
| 19 | ಕೋಲಾರ | 1086 | 2471 | 3557 | 975 | 2033 | 3008 |
| 20 | ಕೊಪ್ಪಳ | 1247 | 2871 | 4118 | 1247 | 2871 | 4118 |
| 21 | ಮಂಡ್ಯ | 5070 | 5326 | 10396 | 4967 | 4852 | 9819 |
| 22 | ಮೈಸೂರು | 1429 | 3378 | 4807 | 1429 | 2654 | 4083 |
| 23 | ರಾಯಚೂರು | 643 | 1714 | 2357 | 643 | 1714 | 2357 |
| 24 | ರಾಮನಗರ | 1859 | 2380 | 4239 | 1842 | 2369 | 4211 |
| 25 | ಶಿವಮೊಗ್ಗ | 3658 | 5951 | 9609 | 3658 | 5951 | 9609 |
| 26 | ತುಮಕೂರು | 4823 | 4902 | 9725 | 3250 | 1699 | 4949 |
| 27 | ಉಡುಪಿ | 664 | 2240 | 2904 | 0 | 0 | 0 |
| 28 | ಉತ್ತರ ಕನ್ನಡ | 2379 | 2351 | 4730 | 2379 | 2351 | 4730 |
| 29 | ವಿಜಯಪುರ | 2669 | 3711 | 6380 | 2669 | 3711 | 6380 |
| 30 | ಯಾದಗಿರಿ | 2712 | 2478 | 5190 | 2712 | 2478 | 5190 |
| | ಒಟ್ಟು | 87292 | 123323 | 210615 | 98881 | 111752 | 211266 |

## ಶಾಲೆಯಿಂದ ಹೊರಗುಳಿದ 6 ತಿಂಗಳಿನಿಂದ 6 ವರ್ಷದ ಮಕ್ಕಳ ಮಾಹಿತಿ (ಜೂನ್ 2022ರ ಅಂತ್ಯಕ್ಕೆ)
## (ಗ್ರಾಮಾಂತರ ಯೋಜನೆಗಳು ಮಾತ್ರ)
## (Rural Projects Only)

| ಕ್ರ. ಸಂ. | ಜಿಲ್ಲೆಗಳ ಹೆಸರು | ಪಂಚಾಯತ್ ರಾಜ್ ಇಲಾಖೆಯವರ ಸರ್ವೆ 2020-21ರ ಅನ್ವಯ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗದ ಮಕ್ಕಳ ಸಂಖ್ಯೆ | | | ಸರ್ವೆ 2020-21ರ ಅನ್ವಯ ಪರಿಶೀಲಿಸಿ ಅಂಗನವಾಡಿ ಕೇಂದ್ರದಲ್ಲಿ ದಾಖಲೆಗೆ ತೆಗೆದುಕೊಂಡ ಮಕ್ಕಳ ಸಂಖ್ಯೆ | | |
|---|---|---|---|---|---|---|---|
| | | 0-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು | 0-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು |
| 1 | 2 | 3 | 4 | 5 | 6 | 7 | 8 |
| 1 | ಬಾಗಲಕೋಟೆ | 2088 | 2661 | 4749 | 1873 | 610 | 2483 |
| 2 | ಬಳ್ಳಾರಿ | 3907 | 7100 | 11007 | 3907 | 7100 | 11007 |
| 3 | ಬೆಳಗಾವಿ | 6489 | 8325 | 14814 | 6489 | 3801 | 10290 |
| 4 | ಬೆಂಗಳೂರು | 3022 | 3671 | 6693 | 3022 | 3671 | 6693 |
| 5 | ಬೆಂಗಳೂರು (ಗ್ರಾ.) | 3501 | 2990 | 6491 | 3501 | 1608 | 5109 |
| 6 | ಬೀದರ್ | 2505 | 4901 | 7406 | 2483 | 4865 | 7348 |
| 7 | ಚಾಮರಾಜನಗರ | 897 | 1462 | 2359 | 897 | 1211 | 2108 |
| 8 | ಚಿಕ್ಕಬಳ್ಳಾಪುರ | 1231 | 1187 | 2418 | 1231 | 178 | 1409 |
| 9 | ಚಿಕ್ಕಮಗಳೂರು | 2722 | 2489 | 5211 | 2426 | 2096 | 4522 |
| 10 | ಚಿತ್ರದುರ್ಗ | 3326 | 5092 | 8418 | 2862 | 3877 | 6739 |
| 11 | ದಕ್ಷಿಣ ಕನ್ನಡ | 2805 | 2070 | 4875 | 2793 | 764 | 3557 |
| 12 | ದಾವಣಗೆರೆ | 3633 | 5170 | 8803 | 3565 | 2090 | 5655 |
| 13 | ಧಾರವಾಡ | 1839 | 3854 | 5693 | 1719 | 1553 | 3272 |
| 14 | ಗದಗ | 1554 | 2351 | 3905 | 1159 | 1157 | 2316 |
| 15 | ಹಾಸನ | 2809 | 3276 | 6085 | 1491 | 638 | 2129 |
| 16 | ಹಾವೇರಿ | 4151 | 3183 | 7334 | 4177 | 4533 | 8710 |
| 17 | ಕಲಬುರಗಿ | 1973 | 3688 | 5661 | 1404 | 2791 | 4195 |
| 18 | ಕೊಡಗು | 2464 | 1994 | 4458 | 2291 | 658 | 2949 |
| 19 | ಕೋಲಾರ | 1718 | 2290 | 4008 | 1434 | 1903 | 3337 |
| 20 | ಕೊಪ್ಪಳ | 2077 | 2992 | 5069 | 1281 | 1550 | 2831 |
| 21 | ಮಂಡ್ಯ | 7899 | 6294 | 14193 | 7899 | 1947 | 9846 |
| 22 | ಮೈಸೂರು | 4792 | 7210 | 12002 | 4792 | 3750 | 8542 |
| 23 | ರಾಯಚೂರು | 1890 | 3602 | 5492 | 1890 | 3602 | 5492 |
| 24 | ರಾಮನಗರ | 2202 | 2148 | 4350 | 2197 | 2134 | 4331 |
| 25 | ಶಿವಮೊಗ್ಗ | 8218 | 5485 | 13703 | 8218 | 5485 | 13703 |
| 26 | ತುಮಕೂರು | 3121 | 3783 | 6904 | 1737 | 1893 | 3630 |
| 27 | ಉಡುಪಿ | 1939 | 1938 | 3877 | 1939 | 1938 | 3877 |
| 28 | ಉತ್ತರ ಕನ್ನಡ | 6990 | 4367 | 11357 | 6990 | 4367 | 11357 |
| 29 | ವಿಜಯಪುರ | 1622 | 2627 | 4249 | 1622 | 2627 | 4249 |
| 30 | ಯಾದಗಿರಿ | 618 | 912 | 1530 | 618 | 912 | 1530 |
| | **ಒಟ್ಟು** | **94002** | **109112** | **203114** | **87907** | **75309** | **171302** |

**ಶಾಲೆಯಿಂದ ಹೊರಗುಳಿದ 6 ತಿಂಗಳಿನಿಂದ 6 ವರ್ಷದ ಮಕ್ಕಳ ಮಾಹಿತಿ (ಜೂನ್ 2022ರ ಅಂತ್ಯಕ್ಕೆ) (ಬಿಬಿಎಂಪಿ ಯೋಜನೆಗಳು ಮಾತ್ರ)**

| ಕ್ರ. ಸಂ. | | ತಾಲ್ಲೂಕಿನ ಹೆಸರು | ಪಂಚಾಯತ್ ರಾಜ್ ಇಲಾಖೆಯವರ ಸರ್ವೆ 2020-21ರ ಅನ್ವಯ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗದ ಮಕ್ಕಳ ಸಂಖ್ಯೆ | | | ಸರ್ವೆ 2020-21ರ ಅನ್ವಯ ಪರಿಶೀಲಿಸಿ ಅಂಗನವಾಡಿ ಕೇಂದ್ರದಲ್ಲಿ ದಾಖಲೆಗೆ ತೆಗೆದುಕೊಂಡ ಮಕ್ಕಳ ಸಂಖ್ಯೆ | | |
|---|---|---|---|---|---|---|---|---|
| | | | 0-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು | 0-3 ವರ್ಷದ ಮಕ್ಕಳ ಸಂಖ್ಯೆ | 3 ರಿಂದ 6 ವರ್ಷದ ಮಕ್ಕಳ ಸಂಖ್ಯೆ | ಒಟ್ಟು |
| 1 | | 3 | 4 | 5 | 6 | 7 | 8 | 9 |
| 1 | ಬಿಬಿಎಂಪಿ (ಬೆಂಗಳೂರು) | ಬೊಮ್ಮನಹಳ್ಳಿ | 61813 | 30935 | 92748 | 11276 | 4864 | 16140 |
| 2 | | ದಾಸರಹಳ್ಳಿ | 2824 | 5657 | 8481 | 2824 | 3438 | 6262 |
| 3 | | ಪೂರ್ವ | 28522 | 37861 | 66383 | 5281 | 6234 | 11515 |
| 4 | | ಮಹದೇವಪೂರ | 32600 | 56426 | 89026 | 9243 | 3112 | 12355 |
| 5 | | ಆರ್ ಆರ್ ನಗರ | 39398 | 44650 | 84048 | 5638 | 2432 | 8070 |
| 6 | | ದಕ್ಷಿಣ | 66975 | 69609 | 136584 | 16056 | 4289 | 20345 |
| 7 | | ಪಶ್ಚಿಮ | 19883 | 30578 | 50461 | 19641 | 5358 | 24999 |
| 8 | | ಯಲಹಂಕ | 18739 | 20789 | 39528 | 18739 | 6876 | 25615 |
| | **ಒಟ್ಟು** | | **270754** | **296505** | **567259** | **88698** | **36603** | **125301** |